

■ ಲಾವಣ್ಯಗೌರಿ ವೆಂಕಟೇಶ್

# ಮನಸ್ಸೆಂಬ ಕನ್ನಡಿ

ನಾಯಿಯೊಂದು ಅಚಾನಕ್ಕಾಗಿ ಸುತ್ತಲೂ ಕನ್ನಡಿಗಳಿರುವ ಕೋಣೆಯೊಂದನ್ನು ಪ್ರವೇಶಿಸುತ್ತದೆ. ಅದು ಕನ್ನಡಿ ಎಂದು ಅರಿಯದ ನಾಯಿಯು, ತನ್ನದೇ ಪ್ರತಿಬಿಂಬವನ್ನು ಸುತ್ತಲೂ ನೋಡಿ ಗಾಬರಿಗೊಳ್ಳುತ್ತದೆ. ಅದು ತನ್ನದೇ ಬಿಂಬ ಎಂದು ತಿಳಿಯದ ನಾಯಿಯು, ತನ್ನದೇ ಪ್ರತಿಬಿಂಬಗಳನ್ನು ತನ್ನ ಪ್ರತಿಸ್ಪರ್ಧಿಗಳೆಂದು ತಿಳಿದು ಬೊಗಳತೊಡಗುತ್ತದೆ. ನಿಸ್ಸಂಶಯವಾಗಿ ನಾಯಿಯ ಪ್ರತಿಬಿಂಬಗಳೂ ಅದನ್ನೇ ಬಿಂಬಿಸುತ್ತವೆ. ಕೋಪಗೊಂಡ ನಾಯಿಯು ಕನ್ನಡಿಯೊಳಗಿನ ಬಿಂಬಗಳೊಂದಿಗೆ ಗುದ್ದಾಡತೊಡಗುತ್ತದೆ. ಆ ಗುದ್ದಾಟದಲ್ಲಿ ಕನ್ನಡಿಯೊಡೆದು ನಾಯಿಯು ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತದೆ. ಸತ್ತ ನಾಯಿಯ ಕಳೇಬರವು ಒಡೆದು ಚೂರು ಚೂರಾದ ಹಲವಾರು ಕನ್ನಡಿಗಳಲ್ಲಿ ಪ್ರತಿಬಿಂಬಿಸುತ್ತದೆ. ಹಾಗೆಯೇ ನಮ್ಮ ಜೀವನದಲ್ಲಿ ನೆಡೆಯುವ ಪ್ರತಿಯೊಂದು ಘಟನೆಯೂ ನಮ್ಮದೇ ಕ್ರಿಯೆಯ ಪ್ರತಿಕ್ರಿಯೆಯಾಗಿರುತ್ತದೆ. ನಮ್ಮ ಸುತ್ತಮುತ್ತ ನಡೆಯುವ ಪ್ರತಿಯೊಂದೂ ಕೂಡಾ ನಮ್ಮ ಯೋಚನೆಗಳ, ನಮ್ಮ ಭಾವನೆಗಳ ಹಾಗೂ ನಮ್ಮ ಹಂಬಲಗಳ ಪ್ರತಿಬಿಂಬವಾಗಿರುತ್ತದೆ!

ನಾವು ಹೇಗಿರುತ್ತೇವೆಯೋ ಹಾಗೆಯೇ ಕನ್ನಡಿಯಲ್ಲಿ ನಮ್ಮ ಪ್ರತಿಬಿಂಬ ಕಾಣುತ್ತದೆ. ಕನ್ನಡಿಯಲ್ಲಿ ನಮ್ಮ ರೂಪು ರೇಷೆಗಳು ಸರಿ ಇಲ್ಲ ಎಂದು ಅನ್ನಿಸಿದ ತಕ್ಷಣ ಅದನ್ನು ಸರಿಪಡಿಸಿಕೊಳ್ಳುತ್ತೇವೆ. ನಮ್ಮ ಹೊರಗಿನ ರೂಪದ ಪ್ರತಿಬಿಂಬ ಕನ್ನಡಿಯಲ್ಲಿ ಕಾಣುತ್ತದೆ. ಹಾಗೆಯೇ ನಮ್ಮ ಒಳಗಿನ ರೂಪದ ಬಿಂಬ ಜೀವನವೆಂಬ ಕನ್ನಡಿಯಲ್ಲಿ ಪ್ರತಿಬಿಂಬವಾಗಿ ಪ್ರತಿಫಲಿಸುತ್ತದೆ. ನಮ್ಮ ಮನೋಭಾವನೆ ಹೇಗಿರುತ್ತದೋ ಅದರ ಬಿಂಬವನ್ನೇ ನಾವು ಹೊರಗಿನ ಪ್ರಪಂಚದಲ್ಲಿ ದೃಷ್ಟಿಸುತ್ತೇವೆ. ನಮ್ಮ ಜೀವನವು ನಮ್ಮ ಆಲೋಚನೆಗಳ ಮೇಲೆ ಅವಲಂಬಿತವಾಗಿರುತ್ತದೆ. ನಮ್ಮ ಚಿಂತನೆಯೇ ನಮ್ಮ ಜೀವನದಲ್ಲಿ ಪ್ರತಿಬಿಂಬವಾಗಿ ಹೊರಹೊಮ್ಮುತ್ತದೆ. ಹುಟ್ಟು, ಸಾವು, ಬಡತನ, ಸಿರಿತನ,